


# ಎತ್ತಿನಹೊಳೆಯಿಂದ ಬಯಲು ಸೀಮೆ ಜಿಲ್ಲೆಗಳಿಗೆ ನೀರು

## ಮಲ್ಲೂರಿನ ಧಾರ್ಮಿಕ ಕಾರ್ಯಕ್ರಮದಲ್ಲಿ ಸಂಸದ ವೀರಪ್ಪ ಮೊಯ್ಲಿ



**ಮಾಗಡಿ**

ಎತ್ತಿನಹೊಳೆ ಯೋಜನೆಯಿಂದ ಎರಡು ವರ್ಷದ ಒಳಗೆ ಬಯಲು ಸೀಮೆಯ ಜಿಲ್ಲೆಗಳ ಜನರಿಗೆ ಕುಡಿಯುವ ನೀರು ಒದಗಿಸುವುದು ನೂರಕ್ಕೆ ನೂರು ಸತ್ಯ ಎಂದು ಸಂಸದ ಡಾ.ಎಂ. ವೀರಪ್ಪ ಮೊಯಿಲಿ ತಿಳಿಸಿದರು,

ಮಲ್ಲೂರಿನಲ್ಲಿ ಭಾನುವಾರ ನಡೆದ ವೀರಭದ್ರಶೇಶ್ವರ ಸ್ವಾಮಿ ನೂತನ ಆಲಯ ಪುನರ್ ಪ್ರತಿಷ್ಠಾಪನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು,

ನಿಸರ್ಗದ ಮಡಿಲಲ್ಲಿ ಮನೆ ಮಾಡಿರುವ ಮಾನವ ಅಂತರಂಗದಲ್ಲಿ ಶೀಲ ಸಂವರ್ಧನೆ ಮಾಡಿಕೊಂಡರೆ ನಮ್ಮೊಳಗೆ ದೇವರನ್ನು ಕಾಣಬಹುದು, ಮಕ್ಕಳಿಗೆ ವಿದ್ಯೆ ಮತ್ತು ಸಂಸ್ಕಾರ ಕಲಿಸುವುದು ಬಹುಮುಖ್ಯ, ಸಮಾನತೆ, ಸೌಹಾರ್ಧತೆ,ದೇಶಾಭಿಮಾನದ ಜೊತೆಗೆ ಹಸಿದವರಿಗೆ ಅನ್ನ ನೀಡುವುದು ದೇವರ ಪೂಜೆಗೆ ಸಮ ಎಂಬುದನ್ನು ಮಕ್ಕಳಿಗೆ ಬಾಲ್ಯದಲ್ಲಿಯೇ ಕಲಿಸಿಕೊಡಬೇಕು. ಮಕ್ಕಳನ್ನು ಬುದ್ಧ ಬಸವಣ್ಣ, ಅಂಬೇಡ್ಕರ್, ವಿವೇಕಾನಂದ ಅವರಂತಹ ದೇಶಭಕ್ತರನ್ನಾಗಿಲು ತಾಯಂದಿರುವ ಶ್ರಮಿಸಬೇಕು. ಮಲ್ಲೂರು ಬಳಿ ಬಸ್ ತಂಗುದಾಣ ಕಟ್ಟಿಸಿ, ಬೊಮ್ಮನಹಳ್ಳಿಯಿಂದ ಅಂಕನ ಹಳ್ಳಿವರೆಗೆ ರಸ್ತೆಗೆ ಡಾಂಬರೀಕರಣ ಮಾಡಿಸುತ್ತೇನೆ, ದೇಗುಲ ಜೀರ್ಣೋದ್ಧಾರಕ್ಕೆ ರೂ,10 ಲಕ್ಷ ನೀಡಿದ್ದೇನೆ. ಇನ್ನೂ ಗ್ರಾಮದ ಅಭಿವೃದ್ದಿಗೆ ಸಹಾಯ ಮಾಡುವುದಾಗಿ ವೀರಪ್ಪ ಮೊಯಿಲಿ ತಿಳಿಸಿದರು,

ಆದಿಚುಂಚನಗಿರಿ ವಿಜಯ ನಗರ ಶಾಖಾ ಮಠಾಧೀಶರಾದ ಸೌಮ್ಯನಾಥ ಸ್ವಾಮೀಜಿ ಮಾತನಾಡಿ ಅನ್ನದಾತ ರೈತರ ಮೊಗದಲ್ಲಿ ನಗುಮೂಡಿದಾಗ ಎಲ್ಲಾ ದೇವರು ಸಂಪ್ರೀತನಾಗುತ್ತಾನೆ, ಪ್ರಕೃತಿಯ ಮುಂದೆ ಪ್ರಧಾನ ಮಂತ್ರಿ ಇತರೆ ಎಲ್ಲರೂ ಗೌಣ. ಎತ್ತಿನ ಹೊಳೆ ಯೋಜನೆ ಒಂದು ಉತ್ತಮ

**ಅನ್ನದಾತ ರೈತರ ಮೊಗದಲ್ಲಿ ನಗುಮೂಡಿದಾಗ ಎಲ್ಲಾ ದೇವರು ಸಂಪ್ರೀತನಾಗುತ್ತಾನೆ, ಪ್ರಕೃತಿಯ ಮುಂದೆ ಪ್ರಧಾನ ಮಂತ್ರಿ ಇತರೆ ಎಲ್ಲರೂ ಗೌಣ. ಎತ್ತಿನ ಹೊಳೆ ಯೋಜನೆ ಒಂದು ಉತ್ತಮ ಯೋಜನೆಯಾಗಿದೆ, ರೈತರಿಗೆ ಸಕಾಲದಲ್ಲಿ ನೀರು ಒದಗಿಸಿದರೆ ಅವರು ಯಾರನ್ನೂ ಏನನ್ನೂ ಕೇಳುವುದಿಲ್ಲ.**

ಯೋಜನೆಯಾಗಿದೆ, ರೈತರಿಗೆ ಸಕಾಲದಲ್ಲಿ ನೀರು ಒದಗಿಸಿದರೆ ಅವರು ಯಾರನ್ನೂ ಏನನ್ನೂ ಕೇಳುವುದಿಲ್ಲ.ಅನ್ನದೇವರ ಮುಂದೆ ಇನ್ನೊಂದು ದೇವರಿಲ್ಲ, ಅನ್ನದಾತರ ಸೇವೆ ಮಾಡುವುದು ಆಳುವ ವರ್ಗದವರ ಮುಖ್ಯ ಗುರಿಯಾಗಿದೆ ಎಂದು ಸ್ವಾಮೀಜಿ ತಿಳಿಸಿದರು,

ಶಿವಗಂಗೆಯ ಮೇಲಣ ಗವಿ ಮಠಾಧೀಶರಾದ ಮಲಯ ಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಮಾತಾಡಿ, ಸುಂದರ ಪರಿಸರದಲ್ಲಿ ಇರುವ ಮಲ್ಲೂರು ಗ್ರಾಮದಲ್ಲಿ ಚೋಳರ ಕಾಲದಲ್ಲಿ ನಿರ್ಮಿಸಿದ್ದು, ವಿನಾಶದ ಅಂಚಿನಲ್ಲಿದ್ದ ವೀರಭದ್ರ ಸ್ವಾಮಿ, ಮೊದಲ ವೈದ್ಯ, ದಕ್ಷಬ್ರಹ್ಮನ ತಲೆತರಿದು ಕುರಿಯ ತಲೆ ಜೋಡಿಸಿದ ವೈದ್ಯ. ಮನೆ ಮನಸ್ಸು ಸ್ವಚ್ಚವಾಗಿಟ್ಟುಕೊಂಡು ಮಕ್ಕಳಿಗೆ ಅಕ್ಷರ ಕಲಿಸಿ, ಮನೆಯಲ್ಲಿ ಶಾಂತಿ ನೆಲೆಸಿದರೆ, ದೇವರು ಮೆಚ್ಚುತ್ತಾನೆ, ದೇವರು ಧರ್ಮದ ಆರಾಧನೆಯಿಂದ ಬದುಕಿನಲ್ಲಿ ನೆಮ್ಮದಿ ಲಭಿಸಲಿದೆ ಎಂದು ಸ್ವಾಮೀಜಿ ತಿಳಿಸಿದರು.

ಮಾಜಿ ಸಚಿವ ಆಂಜನಮೂರ್ತಿ, ಮಾಜಿ ಶಾಸಕ ನಾಗರಾಜು, ಜಿ.ಪಂ,ಮಾಜಿ ಸದಸ್ಯ ಸಿ.ಆರ್.ಗೌಡ, ರಾಜ್ಯ ಬೆಸ್ಕಾಂ ನಿರ್ದೇಶಕ ಬಿ.ವಿ,ಜಯರಾಮು, ಮೋಟಗೊಂಡನಹಳ್ಳಿ ಗ್ರಾಮಪಂಚಾಯಿತಿ ಅಧ್ಯಕ್ಷೆ ಪದ್ಮಾವತಿ ಜಯರಾಮು, ದೇಗುಲವನ್ನು ಜೀರ್ಣೋದ್ಧಾರ ಮಾಡಿಸಿರುವ ಎನ್ .ಪ್ರಕಾಶ್, ಗೌರಮ್ಮ ನಾಗರಾಜು ಇತರರು ಮಾತನಾಡಿದರು, ಗ್ರಾಮಸ್ಥರು ಭಕ್ತರು ಇದ್ದರು. ಸಿಪಾಯಿ ಎನ್.ಪ್ರಕಾಶ್ ಕುಟುಂಬದವರು ವಿಶೇಷ ಪೂಜೆ ಸಲ್ಲಿಸಿದರು.

# ಗುಣಮಟ್ಟದ ಚಿಕಿತ್ಸೆಗೆ ಕೈಜೋಡಿಸಿ

## ಖಾಸಗಿ ಆಸ್ಪತ್ರೆಗಳಿಗೆ ರಾಷ್ಟ್ರಪತಿ ಪ್ರಣಬ್‌ಮುಖರ್ಜಿ ಕರೆ



**ಬೆಂಗಳೂರು**

ಜನ ಸಾಮಾನ್ಯರಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ಖಾಸಗಿ ಆಸ್ಪತ್ರೆಗಳು ಸರ್ಕಾರಿ ಆಸ್ಪತ್ರೆಗಳ ಜೊತೆ ಕೈ ಜೋಡಿಸಬೇಕು ಎಂದು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಕರೆ ನೀಡಿದ್ದಾರೆ.

ಉಡುಪಿಯಲ್ಲಿಂದು ಶಂಭುಶೆಟ್ಟಿ ಸ್ಮಾರಕ ಹಾಜಿ ಅಬ್ದುಲ್ಲಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡುತ್ತಿದ್ದ ಅವರು, ಜನರಿಗೆ ಗುಣಮಟ್ಟದ ಚಿಕಿತ್ಸೆ ನೀಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಖಾಸಗಿ ಆಸ್ಪತ್ರೆಗಳು ಸಹಕರಿಸಬೇಕು. ಕಾಲರಾ, ಪ್ಲೇಗ್, ಕ್ಷಯ ರೋಗಗಳ ನಿವಾರಣೆಗೆ ಅಗತ್ಯವಾದ ಆಧುನಿಕ ಔಷಧಿಗಳ ಆವಿಷ್ಕಾರ ಮತ್ತು ಮೂಲ ಸೌಕರ್ಯಗಳನ್ನು ಒದಗಿಸಬೇಕಿದೆ ಎಂದು ಹೇಳಿದರು.

**ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಖಾಸಗಿ ಆಸ್ಪತ್ರೆಗಳ ಸಹಭಾಗಿತ್ವದೊಂದಿಗೆ ಯೋಜನೆಯನ್ನು ರೂಪಿಸಲಾಗಿದೆ. ದುಬಾರಿ ಚಿಕಿತ್ಸಾ ವೆಚ್ಚವನ್ನು ತಪ್ಪಿಸಲು ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರ ಎಲ್ಲಾ ರೀತಿಯ ನೆರವು ಹಾಗೂ ಚಿಕಿತ್ಸೆಗೆ ಬೇಕಾದ ಸಲಕರಣೆಗಳನ್ನು ಒದಗಿಸಲಿದೆ, ಎಲ್ಲರ ಮನೆ ಬಾಗಿಲಿಗೂ ಚಿಕಿತ್ಸೆಯನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ**

ಆರೋಗ್ಯ ಚಿಕಿತ್ಸಾ ಸವಲತ್ತುಗಳ ವಿಚಾರದಲ್ಲಿ ನಗರಗಳು ಮತ್ತು ಗ್ರಾಮಗಳಿಗೆ ದೊಡ್ಡ ಅಂತರವಿದ್ದು, ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಉತ್ತಮ ಆರೋಗ್ಯ ಚಿಕಿತ್ಸಾ ಕೇಂದ್ರಗಳ ಸ್ಥಾಪನೆ ಅಗತ್ಯವಿದೆ ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ರಮೇಶ್ ಕುಮಾರ್, ಸರ್ಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಖಾಸಗಿ ಆಸ್ಪತ್ರೆಗಳ ಸಹಭಾಗಿತ್ವದೊಂದಿಗೆ ಯೋಜನೆಯನ್ನು ರೂಪಿಸಲಾಗಿದೆ. ದುಬಾರಿ ಚಿಕಿತ್ಸಾ ವೆಚ್ಚವನ್ನು ತಪ್ಪಿಸಲು ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರ ಎಲ್ಲಾ ರೀತಿಯ ನೆರವು ಹಾಗೂ ಚಿಕಿತ್ಸೆಗೆ ಬೇಕಾದ ಸಲಕರಣೆಗಳನ್ನು ಒದಗಿಸಲಿದೆ, ಎಲ್ಲರ ಮನೆ ಬಾಗಿಲಿಗೂ ಚಿಕಿತ್ಸೆಯನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

# ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಭಾರತಕ್ಕೆ ಹೀನಾಯ ಸೋಲು



»»1ನೇ ಪುಟದಿಂದ ಕೊಹ್ಲಿ (5) ತನಗೆ ಸಿಕ್ಕಿದ ಜೀವದಾನದ ಲಾಭವನ್ನೆತ್ತಲಾಗದೇ ಮುಂದಿನ ಎಸೆತದಲ್ಲಿಯೇ ಕ್ಯಾಚ್ ನೀಡಿ ನಿರ್ಗಮಿಸಿದರು. ಧವನ್ (21) ಹಾಗೂ ಯುವರಾಜ್ (22) ಅಳುಕತ್ತಲೇ ಆಡುತ್ತ ಜೊತೆಯಾಟ ಬೆಳೆಸಲು ಯತ್ನಿಸಿದಾದರೂ ಇವರ ಆಟ ಪಾಕ್ ಬೌಲರ್ ಗಳ ಮುಂದೆ ಬಹಳಷ್ಟು ಹೊತ್ತು ನಡೆಯಲಿಲ್ಲ, 21 ರನ್ ಗಳಿಸಿದ್ದ ಧವನ್ ಅಮೀರ್ ಗೆ ವಿಕೆಟ್ ಒಪ್ಪಿಸಿದರೆ ಸ್ವಲ್ಪ ಹೊತ್ತಿನಲ್ಲೇ ಯುವರಾಜ್ ನಿರ್ಗಮಿಸಿದರು. ಅಲ್ಲಿಗೆ ಭಾರತದ ಅವಸ್ಥೆ 54–4 ಆಗಿತ್ತು. ಗ್ರೇಟ್ ಫಿನಿಶರ್ ಖ್ಯಾತಿಯ ಧೋನಿ ಮಾಡಿದ್ದು ನಾಲಕ್ಕೇ ರನ್, ಅವರೂ ಸಹ ಯುವಿ ಬೆನ್ನಲ್ಲೇ ನಿರ್ಗಮಿಸಿ ಭಾರತದ ಪತನದ ಬಾಲವನ್ನು ಬೆಳೆಸಿದರು.

ಮತ್ತೆ ಬಂದ ಕೇಧಾರ್ ಜಾಧವ್ ಆಟ 9ರನ್ನಿಗೇ ಮುಗಿಯಿತು. 72 ಕ್ಕೆ 6 ಎಂಬ ಶೋಚನೀಯ ಪರಿಸ್ಥಿತಿ ಯಲ್ಲಿದ್ದ ಭಾರತದ ಬ್ಯಾಟಿಂಗ್ ಸರಣಿಗೆ ಸ್ವಲ್ಪ ಜೀವ ತುಂಬಿದವರು ಹಾರ್ಧಿಕ್ ಪಾಂಡ್ಯ (76 ರನೌಟ್). ತಮ್ಮ ಬಿರುಸಿನ ಇನ್ನಿಂಗ್ಸ್ ನಲ್ಲಿ ಈ ಯುವ ಆಟಗಾರ ಎದುರಿಸಿದ್ದು 43 ಎಸೆತಗಳನ್ನು, ಇದರಲ್ಲಿ 4 ಬೌಂಡರಿ ಮತ್ತು 6 ಭರ್ಜರಿ ಸಿಕ್ಸರ್ ಮೂಲಕ 76 ರನ್ ಸಿಡಿಸಿ ಇಲ್ಲದ ರನ್ನಿಗೆ ಓಡಿ ಪಂದ್ಯದ ನಿರ್ಣಾಯಕ ಹಂತದಲ್ಲಿ ರನೌಟ್ ಆಗಿ ನಿರ್ಗಮಿಸಿದರು. ಆಗ ಭಾರತದ ಸ್ಕೋರ್ ಬೋರ್ಡ್‌ರ್ 152 ಕ್ಕೆ 7 ಆಗಿತ್ತು.

ಕೊನೆಯಲ್ಲಿ ಜಡೇಜಾ (15), ಅಶ್ವಿನ್ (1), ಭುವನೇಶ್ವರ್ ಕುಮಾರ್ (1★) ಮತ್ತು ಬುಮ್ರಾ (1) ಬ್ಯಾಟ್ ಮಾಡಲಷ್ಟೇ ಕ್ರೀಸಿಗೆ ಬಂದಂತಿತ್ತು. ಪಾಂಡ್ಯ ವಿಕೆಟ್ ಬಿದ್ದೊಡನೆ ಪಾಕಿಸ್ತಾನದ ಐತಿಹಾಸಿಕ ವಿಜಯಕ್ಕೆ ಕ್ಷಣಗಣನೆಯಷ್ಟೇ ಬಾಕಿಯಿತ್ತು. ಕೊನೆಯಲ್ಲಿ ಭಾರತವು 30.3 ಓವರ್ ಗಳಲ್ಲಿ 158 ರನ್ನಿಗೆ ಆಲೌಟ್ ಆಗುವ ಮೂಲಕ 180 ರನ್ನುಗಳ ಭಾರೀ ಅಂತರದಿಂದ ಪಾಕಿಗೆ ಶರಣಾಗಿ ತನ್ನ ಕೈಯಲ್ಲಿದ್ದ ಚಾಂಪಿಯನ್ಸ್ ಪಟ್ಟವನ್ನು ತನ್ನ ಬದ್ಧ ಎದುರಾಳಿಗೆ ಒಪ್ಪಿಸಿಬಿಟ್ಟಿತು.

6 ಓವರುಗಳಲ್ಲಿ 2 ಮೇಡನ್ ಮೂಲಕ ಕೇವಲ 16 ರನ್ನುಗಳನ್ನು ನೀಡಿ 3 ಅತ್ಯಮೂಲ್ಯ ವಿಕೆಟ್ (ರೋಹಿತ್ ಶರ್ಮಾ, ಶಿಖರ್ ಧವನ್ ಮತ್ತು ವಿರಾಟ್ ಕೊಹ್ಲಿ) ಪಡೆದ 25 ವರ್ಷದ ಯುವ ವೇಗಿ ಮಹಮ್ಮದ್ ಅಮೀರ್ ಪಾಕಿಸ್ತಾನದ ಐತಿಹಾಸಿಕ ಗೆಲುವಿನ ರೂವಾರಿಯಾಗಿ ಮೂಡಿಬಂದರು. ಇದಕ್ಕೂ ಮೊದಲು ಇನ್ನೋರ್ವ ಯುವ ಆಟಗಾರ ಫರ್ಖಾ ಝುಮಾನ್ (114) ತನ್ನ ಚೊಚ್ಚಲ ಶತಕದ ಮೂಲಕ ಪಾಕ್ ಭರ್ಜರಿ ಮೊತ್ತ ಪೇರಿಸಲು ನೆರವಾಗಿದ್ದರು. ಅಂತೂ ಭಾರತೀಯ ಆಟಗಾರರಿಗೆ ಹೋಲಿಸಿದಲ್ಲಿ ಪಾಕ್ ತಂಡದ ಇಂದಿನ ಬ್ಯಾಟಿಂಗ್, ಬೌಲಿಂಗ್ ಹಾಗೂ ಫೀಲ್ಡಿಂಗ್ ಹೆಚ್ಚು ಶಿಸ್ತುಬದ್ಧವಾಗಿತ್ತು.

**ಪಾಕ್ ಭರ್ಜರಿ ಬ್ಯಾಟಿಂಗ್ ; ಚಾಂಪಿಯನ್ಸ್‌ಗಳಿಗೆ 339 ರನ್ ಟಾರ್ಗೆಟ್**

ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯ ಡ್ರೀಂ ಫೈನಲ್ ಕಾದಾಟದಲ್ಲಿ ಚಾಂಪಿಯನ್ಸ್ ಪಟ್ಟವನ್ನು ಉಳಿಸಿಕೊಳ್ಳಲು ಬಲಿಷ್ಠ ಭಾರತಕ್ಕೆ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವು 339 ರನ್ನುಗಳ ಕಠಿಣ ಗುರಿಯನ್ನು ನೀಡಿದೆ. ಇವತ್ತಿನ ಹೈ ವೋಲ್ಟೇಜ್ ಫೈನಲ್ ಕಾದಾಟದಲ್ಲಿ ಟಾಸ್ ಗೆಲ್ಲುವ ಅದೃಷ್ಟ ಟೀಂ ಇಂಡಿಯಾ ಕಪ್ತಾನ ಕೊಹ್ಲಿ ಪಾಲಾಯಿತು. ಟಾಸ್ ಗೆದ್ದು ಎದುರಾಳಿಗಳನ್ನು ಬ್ಯಾಟಿಂಗ್ ಗೆ ಇಳಿಸಿದ ಕೊಹ್ಲಿಗೆ ಪಾಕ್ ಆರಂಭಿಕ ಆಟಗಾರರು ಆಘಾತ ನೀಡಿದರು.

ಆರಂಭಿಕ ಆಟಗಾರರಾದ ಅಜರ್ ಆಲಿ (59) ಮತ್ತು ಶತಕ ವೀರ ಫರ್ಖಾ ಝುಮಾನ್ (114) ಅವರ 128 ರನ್ನುಗಳ ಭರ್ಜರಿ ಜೊತೆಯಾಟದ ಮೂಲಕ ಭಾರತೀಯ ಬೌಲರ್ ಗಳ ಬೆವರಿಳಿಸಿದರು. ಬಳಿಕ ಬಾಬರ್ ಅಝುಂ (46) ಮತ್ತು ಬಿರುಸಿನ ಆಟವಾಡುವ ಮೂಲಕ 37 ಬಾಲ್ ಗಳಲ್ಲಿ ಭರ್ಜರಿ 57 ರನ್ನುಗಳನ್ನು ಸಿಡಿಸಿದ ಮಹಮ್ಮದ್ ಹಫೀಝ್ ಹಾಗೂ ಇಮಾದ್ ವಾಸಿಂ (25) ಅವರ ಕೊನೆ ಕ್ಷಣದ ಅತ್ಯಮೂಲ್ಯ ಜೊತೆಯಾಟದಿಂದ ಪಾಕ್ ನಿಗದಿತ 50 ಓವರುಗಳಲ್ಲಿ 4 ವಿಕೆಟ್ ಕಳೆದುಕೊಂಡು 338 ರನ್ನುಗಳ ಸವಾಲಿನ ಮೊತ್ತವನ್ನು ಪೇರಿಸಿತು.

ಭಾರತೀಯ ಬೌಲರ್ಗಳಲ್ಲಿ ವೇಗಿ ಭುವನೇಶ್ವರ್ ಕುಮಾರ್ ಮಾತ್ರವೇ ಪಾಕ್ ಆಟಗಾರರನ್ನು ಸ್ವಲ್ಪ ಮಟ್ಟಿಗೆ ಕಟ್ಟಿಹಾಕುವಲ್ಲಿ ಯಶಸ್ವಿಯಾದರು. ಭುವನೇಶ್ವರ್ ತನ್ನ 10 ಓವರ್ ಗಳ ದಾಳಿಯಲ್ಲಿ 2 ಮೇಡನ್ ಮೂಲಕ ಕೇವಲ 44 ರನ್ನುಗಳನ್ನು ನೀಡಿ 1 ವಿಕೆಟ್ ಪಡೆದರು. ಇವರನ್ನು ಬಿಟ್ಟರೆ ಹಾರ್ಧಿಕ್ ಪಾಂಡ್ಯ (10 ಓವರ್ 53 ರನ್ 1 ವಿಕೆಟ್) ಮಾತ್ರ ಪರಿಣಾಮಕಾರಿ ಎಣಿಸಿದರು ಉಳಿದಂತೆ ಜಡೇಜಾ, ಅಶ್ವಿನ್, ಬುಮ್ರಾ ದುಬಾರಿಯೆಣಿಸದರು. ಪಾಕ್ ಪರ ಉರುಳಿದ 4 ವಿಕೆಟ್ ಗಳಲ್ಲಿ, ಅರ್ಜ ಅವರು ರನೌಟ್ ಆದರೆ, ಉಳಿದ ಮೂರು ವಿಕೆಟ್ ಗಳನ್ನು ಭುವನೇಶ್ವರ್ ಕುರ್ಮಾ, ಪಾಂಡ್ಯ ಮತ್ತು ಜಾಧವ್ ಹಂಚಿಕೊಂಡರು.

# ಕಾವೇರಿ ಕಣಿವೆಯಲ್ಲಿ ಉತ್ತಮ ಮಳೆ

**ಬೆಂಗಳೂರು**

ಕಾವೇರಿ ಕಣಿವೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಈ ಪ್ರದೇಶದ ಎಲ್ಲಾ ಅಣೆಕಟ್ಟುಗಳಲ್ಲಿ ಉತ್ತಮ ಒಳ ಹರಿವು ಕಂಡು ಬಂದಿದ್ದು, ಮೂರು ವರ್ಷದ ಸತತ ಬರದಿಂದ ಬಳಲಿದ್ದ ಈ ಪ್ರದೇಶದಲ್ಲಿ ಈ ಬಾರಿ ಉತ್ತಮ ಮಳೆಯಾಗುವ ಸಾಧ್ಯತೆಯಿದೆ.

ಕೆಲ ವರ್ಷದಿಂದ ಕಾವೇರಿ ನದಿಗೆ ಅಡ್ಡವಾಗಿ ಕಟ್ಟಿರುವ ಕೃಷ್ಣರಾಜ ಸಾಗರ ಅಣೆಕಟ್ಟು ಸಂಪೂರ್ಣವಾಗಿ ಬರಿದಾಗಿತ್ತು. ಈ ಬಾರಿ ಹಾಸನ ಮತ್ತು ಕೊಡಗು ಜಿಲ್ಲೆಯಲ್ಲಿ ಸುರಿದ ಮಳೆಯಿಂದಾಗಿ 1397 ಕ್ಯೂಸೆಕ್ ನೀರಿನ ಒಳಹರಿವು ದಾಖಲಾಗಿದ್ದು, ಜಲಾಶಯದ ನೀರಿನ ಮಟ್ಟ 67.86 ಅಡಿ ಇತ್ತು.

ನೈರುತ್ಯ ಮುಂಗಾರು ಉತ್ತರ ಒಳನಾಡಿನಲ್ಲಿ ಚುರುಕುಗೊಂಡಿದೆ. ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ದುರ್ಬಲಗೊಂಡಿದೆ.

ಗೋಕಾಕ್, ಬಾವಿಕೆರೆ 4, ಶಿರಾಲಿ, ಕಾರವಾರ, ಕುಮುಟಾ, ಅಂಕೋಲಾ, ಬೈಲಹೊಂಗಲ, ಹುಕ್ಕೇರಿ, ಗದಗ್, ಇಂಡಿಯಲ್ಲಿ 3 ಸೆಂಟಿಮೀಟರ್ ಮಳೆ ಬಿದ್ದಿದೆ. ಕರಾವಳಿಯ ಬಹುತೇಕ ಮತ್ತು ಒಳನಾಡಿನ ಅನೇಕ ಕಡೆ ಮಳೆಯಾಗುವ ಸಾಧ್ಯತೆಯಿದೆ.

ಬೆಂಗಳೂರಿನಲ್ಲಿ ಸಾಮಾನ್ಯ ಮೋಡವಿದ್ದು, ಬಲವಾಗಿ ಮೇಲ್ಮೈಗಾಳಿ ಬೀಸಲಿದ್ದು, ಮಳೆಯಾಗುವ ಸಾಧ್ಯತೆಯಿದೆ.


**ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, (ಜಿಲ್ಲಾ ಪಂಚಾಯತ್.)ತುಮಕೂರು**

ಸಂಖ್ಯೆ: ತೋಉನಿ/ಹಿಸತೋನಿ/ಜಿಪಂ/ತು/ವಿನಿ1/14/2017–18 ದಿನಾಂಕ:12–06–2017

**ಟೆಂಡರ್ ಪ್ರಕಟಣೆ**

ತುಮಕೂರು ಜಿಲ್ಲೆಯ ತೋಟಗಾರಿಕೆ ಇಲಾಖೆಯ ಹಾರ್ಟಿ ಕ್ಲಿನಿಕ್ ನಲ್ಲಿ ಒಬ್ಬ ವಿಷಯ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ದಿನಾಂಕ : 01–06–2017 ರಿಂದ 31–3–2018 ರ ತನಕ 10 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲು ಟೆಂಡರ್ ಧರಗಳನ್ನು ಆಹ್ವಾನಿಸಲಾಗಿದೆ. ದಿನಾಂಕ : 30–06–2017 ರ ತನಕ ಟೆಂಡರ್ ಅರ್ಜಿಗಳನ್ನು ಸಲ್ಲಿಸಬಹುದು. ಆರ್ಥಿಕ ಮತ್ತು ತಾಂತ್ರಿಕ ಬಿಡ್ಡ್‌ಗಳನ್ನು ಈ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು ಹಾಗೂ ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ :0816–2278647 ರ ಮೂಲಕ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ತೋಟಗಾರಿಕೆ ಉಪನಿರ್ದೇಶಕರು (ಜಿಲ್ಲಾ ಪಂಚಾಯತ್,) ತುಮಕೂರು.

ಕರ್ನಾಟಕ ಸರ್ಕಾರ

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು.**

ಸಂ:ಉನಿತು:ಮಮಇ:ಸ್ವೀಕೇ:ಬಾಮೂಸಿ:2017–18 ದಿನಾಂಕ: 14–06–2017

**ಟೆಂಡರ್ ಸಂಕ್ಷಿಪ್ತ ಪ್ರಕಟಣೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ವೀಕಾರ ಕೇಂದ್ರ ತುಮಕೂರು ಸಂಸ್ಥೆಯಲ್ಲಿ ರಕ್ಷಕ–02 ಹುದ್ದೆಗೆ ಬಾಹ್ಯಮೂಲದಿಂದ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು 2017–18 ನೇ ಸಾಲಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ಹಾಗೂ ತಿದ್ದುಪಡಿಗಳ ಪ್ರಕಾರ "ದ್ವಿಲಕೋಟೆ ಪದ್ಧತಿ" ಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರಗಳು ಈ ಕೆಳಕಂಡಂತಿವೆ.

| | | |
|---|---|---|
| 1 | ಟೆಂಡರ್ ಪ್ರಕಟಣೆ ದಿನಾಂಕ: | 14–06–2017 |
| 2 | ಟೆಂಡರ್‌ನ ಅಂದಾಜು ಮೊತ್ತ: ರೂ. | ರೂ.4.90 ಲಕ್ಷ |
| 3 | ಟೆಂಡರ್ ಫಾರಂಗಳನ್ನು ವಿತರಿಸುವ ಪ್ರಾರಂಭಿಕ ದಿನಾಂಕ: | 15–06–2017 |
| 4 | ಮೊಹರಾದ ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ | 30–06–2017 ಮಧ್ಯಾಹ್ನ 2–00 ಗಂಟೆ |
| 5 | ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ | 30–06–2017 ಮಧ್ಯಾಹ್ನ: 3–00 ಗಂಟೆ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಲಭವನ ಕಟ್ಟಡ, ಮಹಾತ್ಮ ಗಾಂಧಿ ರಸ್ತೆ, ತುಮಕೂರು |

ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.
ಕಛೇರಿ ದೂರವಾಣಿ ಸಂಖ್ಯೆ: 0816–2272590

ಸಹಿ/– ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು


# ಶಿಸ್ತುಬದ್ಧ ಬದುಕಿಗೆ ಯೋಗ ಸಹಕಾರಿಯಾಗಲಿದೆ




**ದಾವಣಗೆರೆ**

ಮನುಷ್ಯನ ಬದುಕು ಶಿಸ್ತುಬದ್ಧವಾಗಿರಬೇಕಾದರೆ, ಯೋಗ ಸಹಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅಭಿಪ್ರಾಯಪಟ್ಟರು.

ನಗರದ ದೇವರಾಜ ಅರಸು ಬಡಾವಣೆಯ ಲಯನ್ಸ್ ಕ್ಲಬ್ ಆವರಣದಲ್ಲಿ ಜಿಲ್ಲಾ ಯೋಗ ಒಕ್ಕೂಟ ಹಾಗೂ ಜಿಲ್ಲಾ ಆಯುಷ್ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ 3ನೇ ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಯೋದ ಸ್ಪರ್ಧೆಯನ್ನು ಯೋಗಾಸನ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ಜಾತೀಕರಣದ ಪೈಪೋಟಿಯ ಜೀವನದಲ್ಲಿ ಮನುಷ್ಯ ಆರೋಗ್ಯಕ್ಕೆ ಒತ್ತು ನೀಡುತ್ತಿಲ್ಲ, ಯಾರೂ ನಮ್ಮ ಆರೋಗ್ಯ, ದೇಹ ಮತ್ತು ಮನಸ್ಸಿ ಸ್ಥಿತಿಯ ಬಗ್ಗೆ ಚಿಂತನೆಯೇ ಮಾಡುತ್ತಿಲ್ಲ, ಹೀಗಾಗಿ ವಿವಿಧ ರೋಗ–ರುಜಿನಗಳಿಗೆ ಮನುಷ್ಯ ತುತ್ತಾಗುತ್ತಿದ್ದಾನೆ. ಹೀಗಾಗಿ ಮನುಷ್ಯ ಆರೋಗ್ಯದ ಕಡೆಗೆ ಗಮನ ಹರಿಸುವುದರ ಜೊತೆಗೆ ಶಿಸ್ತು ಬದ್ಧ ಜೀವನ ನಡೆಸಬೇಕಾಗಿದೆ. ಇಂತಹ ಶಿಸ್ತುಬದ್ಧ ಜೀವನಕ್ಕೆ ಯೋಗ ಸಹಕಾರಿಯಾಗಿದೆ ಎಂದರು.

ದಿನದ 10ರಿಂದ 15 ನಿಮಿಷವಾದರೂ ಯೋಗಾಭ್ಯಾಸಕ್ಕೆ ಸಮಯ ಮೀಸಲಿಟ್ಟರೆ, ನಮ್ಮ ಆರೋಗ್ಯ ವೃದ್ಧಿಯ ಜೊತೆಗೆ ಜೀವನದಲ್ಲಿ ಸಾಧನೆಯನ್ನು ಮಾಡಬಹುದಾಗಿದೆ. ಮಾನಸಿಕ ಹಿಡಿತ ಸಾಧಿಸಲು ಯೋಗ ನೆರವಾಗಲಿದೆ. ಮಕ್ಕಳನ್ನು ಚಿಕ್ಕ ವಯಸ್ಸಿನಿಂದಲೇ ಯೋಗದಲ್ಲಿ ತೊಡಗಿಸಿದರೆ, ಮುಂದೆ ಉತ್ತಮ ಆರೋಗ್ಯ ಕಾಣಲು ಸಾಧ್ಯವಾಗುತ್ತದೆ ಎಂದು ಹೇಳಿದರು.

**ಪ್ರಸ್ತುತ ಎಲ್ಲರೂ ಒತ್ತಡದ ಜೀವನಕ್ಕೆ ಒಳಗಾಗಿದ್ದಾರೆ. ಹೀಗಾಗಿ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಎಲ್ಲರಿಗೂ ಉತ್ತಮ ಆರೋಗ್ಯಬೇಕಾಗಿದೆ. ಈ ಉತ್ತಮ ಆರೋಗ್ಯ ಪಡೆಯಬೇಕಾದರೆ ಯೋಗಾಸನ ಅವಶ್ಯವಾಗಿದ್ದು, ಆದ್ದರಿಂದ ಸರ್ಕಾರ ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಪಾಠ–ಪ್ರವಚನದ ಜೊತೆಗೆ ಯೋಗ ಕಲಿಸುವತ್ತವೂ ಗಮನ ಹರಿಸಬೇಕಿದೆ.**

**■ ದಿನೇಶ್ ಕೆ. ಶೆಟ್ಟಿ,ಪಾಲಿಕೆ ಸದಸ್ಯ.**

ಹುಟ್ಟಿನಿಂದ ಸಾವಿನ ವರೆಗೂ ನಮ್ಮ ಜೀವ ಇರುವುದೇ ಒಂದು ಯೋಗ. ಈ ಯೋಗದಲ್ಲಿ ನಮ್ಮ ಭವಿಷ್ಯ ಮತ್ತು ಆರೋಗ್ಯ ಅಡಗಿದೆ. ಆದರೆ, ಇದನ್ನು ಯಾರೂ ಸಹ ಹುಡುಕುವ ಪ್ರಯತ್ನ ಮಾಡುತ್ತಿಲ್ಲ, ಪ್ರತಿಯೊಂದು ಜೀವಿಯೂ ಜೀವಿಸಲು ಪ್ರಕೃತಿ ಅಪಾರ ಕೊಡುಗೆ ನೀಡಿದೆ. ಇಂತಹ ಪ್ರಕೃತಿಯ ಜೊತೆಗೆ ನಮ್ಮ ಒಡನಾಟ ಇರುವ ವರೆಗೂ ನಮ್ಮ ಜೀವನ ಉತ್ತಮವಾಗಿರುತ್ತದೆ. ಮನುಷ್ಯ ಇಲ್ಲದಿದ್ದರೂ ಪ್ರಕೃತಿ ಮತ್ತು ವಿಶ್ವ ಇರುತ್ತೆ. ಆದರೆ, ಇವೆರಡೂ ಇಲ್ಲದಿದ್ದರೆ ಮನುಷ್ಯ ಬದುಕಲು ಸಾಧ್ಯವಿಲ್ಲ, ಹೀಗಾಗಿ ನಮ್ಮ ಆಲೋಚನೆ ಬದಲಿಸಿಕೊಂಡು ಪ್ರಕೃತಿಯ ಜೊತೆಗೆ ಉತ್ತಮ ಒಡನಾಟ ಇರಿಸಿಕೊಳ್ಳಬೇಕಾಗಿದೆ ಎಂದರು.

ಪಾಲಿಕೆ ಸದಸ್ಯ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಪ್ರಸ್ತುತ ಎಲ್ಲರೂ ಒತ್ತಡದ ಜೀವನಕ್ಕೆ ಒಳಗಾಗಿದ್ದಾರೆ. ಹೀಗಾಗಿ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದು, ಎಲ್ಲರಿಗೂ ಉತ್ತಮ ಆರೋಗ್ಯಬೇಕಾಗಿದೆ. ಈ ಉತ್ತಮ ಆರೋಗ್ಯ ಪಡೆಯಬೇಕಾದರೆ ಯೋಗಾಸನ ಅವಶ್ಯವಾಗಿದ್ದು, ಆದ್ದರಿಂದ ಸರ್ಕಾರ ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಪಾಠ–ಪ್ರವಚನದ ಜೊತೆಗೆ ಯೋಗ ಕಲಿಸುವತ್ತವೂ ಗಮನ ಹರಿಸಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಯೋಗ ಒಕ್ಕೂಟದ ವಾಸುದೇವ ರಾಯ್ಕರ್, ಶಿವಪ್ಪ, ಲಯನ್ಸ್ ಕ್ಲಬ್‌ನ ಬೆಳ್ಳೂಡಿ ಶಿವಕುಮಾರ್, ಜಿ.ನಾಗನೂರು, ಆಯುಷ್ ಅಧಿಕಾರಿ ಡಾ.ಯು.ಸಿದ್ದೇಶ್, ಪ್ರಭುದೇವ್, ರಾಜು ಬದ್ದಿ, ಪ್ರಕಾಶ್ ಉತ್ತಂಗಿ, ತೀರ್ಥರಾಜ್ ಹೋಲೂರು, ಮಹಾದೇವ್‌ಗೌಡ್ರು, ಬಾದಮಿ ಜಯಣ್ಣ, ನೀಲಪ್ಪ ಮತ್ತಿತರರು ಹಾಜರಿದ್ದರು

# ಜೂನ್ 21 : ಅಂತರಾಷ್ಟ್ರೀಯ ಯೋಗ ದಿನ

**ಬೆಂಗಳೂರು**

ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನ. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ವಿವಿಧೆಡೆ ಇಂದು ಯೋಗ ಪ್ರದರ್ಶನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಆರೋಗ್ಯ ಮತ್ತು ಆಯುಷ್ ಇಲಾಖೆವತಿಯಿಂದ ರಾಜಭವನದಿಂದ ವಿಧಾನಸೌಧದವರೆಗೆ ಯೋಗ ನಡಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ರಾಜ್ಯಪಾಲ ವಜೂಭಾಯಿ ವಾಲಾ ಯೋಗ ನಡಿಗೆಗೆ ಚಾಲನೆ ನೀಡಿದರು.

ಯೋಗ ನಡಿಗೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ರಮೇಶ್ ಕುಮಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ನಂತರ ವಿಧಾನಸೌಧದ ಮುಂಭಾಗದಲ್ಲಿ ದಾಖಲೆಯ ಸಾಮೂಹಿಕ ಶಿರ್ಷಾಸನ ನಡೆಸಲಾಯಿತು.

ಓದಿರಿ ಪ್ರಜಾಪ್ರಗತಿ ವೀಕ್ಷಿಸಿ ಪ್ರಗತಿ ಟಿವಿ


ಕರ್ನಾಟಕ ಸರ್ಕಾರ

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು.**

ಸಂ:ಉನಿತು:ಮಇ:ಸಿಬ್ಬಂದಿ:ಬಾಮೂಸೇ:2017–18 ದಿನಾಂಕ:14–06–2017

**ಟೆಂಡರ್ ಸಂಕ್ಷಿಪ್ತ ಪ್ರಕಟಣೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿನ **"ಐ.ಸಿ.ಡಿ.ಎಸ್"** ಕೋಶದಲ್ಲಿ ಖಾಲಿ ಇರುವ **ಬೆರಳಚ್ಚುಗಾರ ಹುದ್ದೆಗೆ** ಸಂವಾದಿಯಾಗಿ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬಾಹ್ಯಮೂಲದಿಂದ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಅರ್ಹ ಸ್ವಯಂಸೇವಾ ಸಂಸ್ಥೆಗಳು/ ಏಜೆನ್ಸಿಗಳಿಂದ **2017–18ನೇ ಸಾಲಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧಿನಿಯಮ **1999 ನಿಯಮ 2000** ಹಾಗೂ ತಿದ್ದುಪಡಿಗಳ ಪ್ರಕಾರ "ದ್ವಿಲಕೋಟೆ ಪದ್ದತಿ"ಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಲಾಗಿದೆ. ಟೆಂಡರ್‌ನ ವಿವರಗಳು ಈ ಕೆಳಕಂಡಂತಿವೆ.

| | | |
|---|---|---|
| 1 | ಟೆಂಡರ್ ಪ್ರಕಟಣೆ ದಿನಾಂಕ: | 14–06–2017 |
| 2 | ಟೆಂಡರ್‌ನ ಅಂದಾಜು ಮೊತ್ತ: ರೂ. | 1.51 ಲಕ್ಷ |
| 3 | ಟೆಂಡರ್ ಫಾರಂಗಳನ್ನು ವಿತರಿಸುವ ಪ್ರಾರಂಭಿಕ ದಿನಾಂಕ: | 15–06–2017 |
| 4 | ಮೊಹರಾದ ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ | 30–06–2017 ಮಧ್ಯಾಹ್ನ 1–00 ಗಂಟೆ |
| 5 | ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ | 30–06–2017 ಮಧ್ಯಾಹ್ನ: 3–00 ಗಂಟೆ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಲಭವನ ಕಟ್ಟಡ, ಮಹಾತ್ಮ ಗಾಂಧಿ ರಸ್ತೆ, ತುಮಕೂರು |

ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದು.
ಕಛೇರಿ ದೂರವಾಣಿ ಸಂಖ್ಯೆ: 0816–2272590

ಸಹಿ/– ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು.